**ಮೂ.ದಾ.ನಂ. 38/2016**

ಡಿ.ಡಬ್ಲ್ಯು.1

(ಇಂದು ದಿನಾಂಕ: **13-10-2025** ರಂದು ಸಾಕ್ಷಿದಾರರನ್ನು ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.)

**ಪಾಟೀ ಸವಾಲುಃ ಶ್ರೀ. ಎಮ್.ಎನ್.ಎಸ್. ವಕೀಲರಿಂದಃ**

ದಾವಾಸ್ತಿಗಳು ರಾಮಾ ಸುಬ್ರಾಯ ನಾಯ್ಕ ರವರ ಆಸ್ತಿ ಎಂದರೆ ಸರಿ. ರಾಮಾ ಸುಬ್ರಾಯ ನಾಯ್ಕ ಇತನು 1ನೇ ವಾದಿಯನ್ನು ಮದುವೆ ಆಗಿದ್ದರು ಎಂದರೆ ಸರಿ. 2 ಹಾಗೂ 3ನೇ ವಾದಿಯರು ಅವರ ಮಕ್ಕಳು ಎಂದರೆ ಸರಿ. ರಾಮಾ ಸುಬ್ರಾಯ ನಾಯ್ಕ ಇವರಿಗೆ ವಾದಿಯರನ್ನು ಹೊರತುಪಡಿಸಿ ಬೇರೆ ವಾರಿಸುದಾರರು ಇರುವುದಿಲ್ಲ ಎಂದರೆ ಸರಿ. ನನಗೆ ಹಾಗೂ ರಾಮಾ ಸುಬ್ರಾಯ ನಾಯ್ಕ ಇವರಿಗೆ ಯಾವುದೇ ರಕ್ತ ಸಂಬಂಧ ಇಲ್ಲ ಎಂದರೆ ಸರಿ. ರಾಮಾ ಸುಬ್ರಾಯ ನಾಯ್ಕ ಇತನು ಅವನ ಜೀವಿತಾ ಕಾಲದಲ್ಲಿ ಗಜನಿ ಸ್ಥ,ಳದಿಂದ ಬರುವಂತಹ ಹಣವನ್ನು ಆತನೇ ಪಡೆದುಕೊಳ್ಳುತ್ತಿದ್ದನು ಎಂದರೆ ಸರಿ.

ರಾಮಾ ಸುಬ್ರಾಯ ನಾಯ್ಕ ಇತನು ದಿಃ 26/01/2014 ರಂದು ಮೃತರಾಗಿರುತ್ತಾರೆ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರಿದು ದಿಃ 16/01/2014 ರಂದು ಮೃತರಾಗಿರುತ್ತಾರೆ ಎಂದು ನುಡಿಯುತ್ತಾರೆ. ಅವರು ತೀರಿ ಹೋದ ನಂತರ ಗಜನಿಯಿಂದ ಬರುವಂತಹ ಹಣವನ್ನು ನಮಗೆ ಬರಬೇಕೆಂದು ಅರ್ಜಿಯನ್ನು ನೀಡಿದ್ದೇವೆ ಎಂದರೆ ಸಾಕ್ಷಿಯು ನನಗೆ ನೀಡಬೇಕು ಎಂದು ರಾಮಾ ಸುಬ್ರಾಯ ನಾಯ್ಕ ಇತನು ನೀಡಿರುತ್ತಾನೆ ಎಂದು ನುಡಿಯುತ್ತಾರೆ. ಸದ್ರಿ ದಾಖಲಾತಿಯು ನನ್ನ ಬಳಿ ಇರುವುದಿಲ್ಲ. ರಾಮಾ ಸುಬ್ರಾಯ ನಾಯ್ಕ ಇತನು ಗಜನಿ ಹಣವನ್ನು ನನಗೆ

ನೀಡಬೇಕು ಎಂದು ಯಾವುದೇ ಅರ್ಜಿಯನ್ನು ಸಲ್ಲಿಸಲಿಲ್ಲ ಎಂದರೆ ಸರಿಯಲ್ಲ. ವಾದಿಯರು ರಾಮಾ ಸುಬ್ರಾಯ ನಾಯ್ಕ ತೀರಿ ಹೋದ ನಂತರ ಗಜನಿ ಹಣವನ್ನು ನಮಗೆ ನೀಡಬೇಕು ಎಂದು ಅರ್ಜಿಯನ್ನು ನೀಡಿದ್ದರು ಎಂದರೆ ಸರಿ. ನಂತರದಲ್ಲಿ ಸದ್ರಿ ಹಣವನ್ನು ನನಗೆ ನೀಡಲಿಲ್ಲ ಎಂದರೆ ಸರಿ. ವಾದಿಯರು ಹೇಳಿದಂತೆ ಅರ್ಜಿಯನ್ನು ನೀಡಿದ್ದರೂ ಸಹ 1ನೇ ಪ್ರತಿವಾದಿಯರು 2ನೇ ಪ್ರತಿವಾದಿಗೆ ಹಣವನ್ನು ನೀಡುತ್ತಿದ್ದರು ಎಂದರೆ ಸರಿಯಲ್ಲ. ಆದ್ದರಿಂದ ವಾದಿಯರು ಈ ದಾವೆಯನ್ನು ದಾಖಲು ಮಾಡಿ ಅದರಲ್ಲಿ 1ನೇ ಪ್ರತಿವಾದಿಯು ನನಗೆ ಹಣವನ್ನು ನೀಡಬಾರದು ಎಂದು ಮಧ್ಯಂತರ ಅರ್ಜಿಯನ್ನು ಸಲ್ಲಿಸಿರುತ್ತಾರೆ ಎಂದರೆ ಸಾಕ್ಷಿಯು ನನಗೆ ಈ ಬಗ್ಗೆ ತಿಳಿದಿಲ್ಲ ಎಂದು ನುಡಿಯುತ್ತಾರೆ.

ನ್ಯಾಯಾಲಯದಲ್ಲಿ ಮಧ್ಯಂತರ ಅರ್ಜಿಯನ್ನು ಪುರಸ್ಕರಿಸಿದ ನಂತರ 1ನೇ ಪ್ರತಿವಾದಿಯು ನನಗೆ ಹಣವನ್ನು ನೀಡಲಿಲ್ಲ ಎಂದರೆ ಸಾಕ್ಷಿಯು ರಾಮಾ ಸುಬ್ರಾಯ ನಾಯ್ಕ ಇತನ ಮರಣಾ ನಂತರ ನನಗೆ ಹಣವನ್ನು ನೀಡಲಿಲ್ಲ ಎಂದು ನುಡಿಯುತ್ತಾರೆ. ಮಧ್ಯಂತರ ಅರ್ಜಿಯಲ್ಲಿ ಅರ್ಜಿ ಸಂಖ್ಯೆ 3 ರಲ್ಲಿ ಆದೇಶ ಆಗುವವರೆಗೆ ನನಗೆ 1ನೇ ಪ್ರತಿವಾದಿಯರು ಹಣವನ್ನು ನೀಡುತ್ತಿದ್ದರು ಎಂದರೆ ಸರಿಯಲ್ಲ.

ರಾಮಾ ಸುಬ್ರಾಯ ನಾಯ್ಕ ತೀರಿ ಹೋದ ನಂತರ ವಿಲ್ ನಾಮೆಯನ್ನು 1ನೇ ಪ್ರತಿವಾದಿಗೆ ಹಾಜರುಪಡಿಸಿ, ರಾಮಾ ಸುಬ್ರಾಯ ನಾಯ್ಕ ಇತನಿಗೆ ಬರಬೇಕಾದ ಹಣವನ್ನು ನನಗೆ ನೀಡಿ ಎಂದು ಅರ್ಜಿಯುನ್ನ ಸಲ್ಲಿಸಿರುತ್ತೇನೆ ಎಂದರೆ ಸರಿ. ಸದ್ರಿ ಅರ್ಜಿಯಂತೆ ಹಣವನ್ನು

ನೀಡುತ್ತಿದ್ದಾರೆ ಎಂದರೆ ಸರಿಯಲ್ಲ. ಸದ್ರಿ ಅರ್ಜಿಯ ಮೇಲೆ 1ನೇ ಪ್ರತಿವಾದಿಯು ನನಗೆ ಹಣವನ್ನು ನೀಡುತ್ತಿದ್ದರು ಸಹ ಇಲ್ಲ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಹಾಜರುಪಡಿಸಿದ ವಿಲ್ ನಾಮೆಯು ಭೋಗಸ್ ವಿಲ್ ನಾಮೆ ಎಂದರೆ ಸರಿಯಲ್ಲ.

ವಿಲ್‌ನಾಮೆ ನ್ಯಾಯಾಲಯಕ್ಕೆ ಹಾಜರು ಪಡಿಸಿರುತ್ತೇನೆ. ಸದ್ರಿ ವಿಲ್ ನಾಮೆಯನ್ನು ಗಣೇಶ ವಕೀಲರು ತಯಾರಿಸಿರುತ್ತಾರೆ. ಸದ್ರಿ ವಿಲ್ ನಾಮೆಯನ್ನು ಬರೆಯಲು ಮಾಹಿತಿಯನ್ನು ನೀವು ನೀಡಿದ್ದೀರಾ ಎಂದರೆ ಸಾಕ್ಷಿಯು ಅವರು ಮರಣವಾಗುವ ಸಂದರ್ಭದಲ್ಲಿ ನನಗೆ ವಿಲ್ ನಾಮೆಯ ಕುರಿತಾಗಿ ತಿಳಿದಿರಲಿಲ್ಲ ಎಂದು ನುಡಿಯುತ್ತಾರೆ. ಸದ್ರಿ ವಿಲ್ ನಾಮೆಯನ್ನು ಗಣೇಶ ವಕೀಲರು ನನಗೆ ರಾಮಾ ಸುಬ್ರಾಯ ನಾಯ್ಕ ಇತನು ಮರಣ ಹೊಂದಿದ ನಂತರ ಸುಮಾರು 15 ದಿನಗಳ ನಂತರದಲ್ಲಿ ನೀಡಿರುತ್ತಾರೆ.

ಸದ್ರಿ ವಿಲ್‌ನಾಮೆಯ ಯಾವ ದಿನಾಂಕದಂದು ಮಾಡಿರುತ್ತಾರೆ ಎಂದು ನನಗೆ ನೆನಪಿಲ್ಲ. ರಾಮಾ ಸುಬ್ರಾಯ ನಾಯ್ಕ ಮಾಡಿದ ವಿಲ್‌ನಾಮೆಯು ನೋಂದಾಯಿತ್ ವಿಲ್‌ನಾಮೆ ಆಗಿರುತ್ತದೆ. ಸದ್ರಿ ವಿಲ್ ನಾಮೆಯನ್ನು ಬರೆಯಲು ನಾನು ಹೋಗಿರುವುದಿಲ್ಲ. ಸದ್ರಿ ವಿಲ್ ನಾಮೆಯನ್ನು ಗಣೇಶ ವಕೀಲರಿಗೆ ನಾನೇ ಮಾಹಿತಿಯನ್ನು ನೀಡಿ ತಯಾರಿಸಿದ್ದೇನೆ ಎಂದರೆ ಸರಿಯಲ್ಲ. ಈ ವಿಷಯ ನನಗೆ ತಿಳಿದಿದ್ದರೂ ಸಹ ಇಲ್ಲ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

– 10 –

**ಮೂ.ದಾ.ನಂ. 38/2016**

**ಡಿ.ಡಬ್ಲ್ಯು.1**

**(ಈ ಹಂತದಲ್ಲಿ ಪ್ರತಿವಾದಿ ಪರ ವಕೀಲರು ಮುಂದುವರೆದ ಪಾಟೀ ಸವಾಲಿಗೆ ಸಮಯಾವಕಾಶ ಕೋರಿದ್ದರಿಂದ ಸಮಯಾವಕಾಶ ನೀಡಲಾಯಿತು)**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೇ. ಸರಿ ಇದೆ.

ಸಹಿ ಇದೆ.

ಹೆಚ್ಚುವರಿ ಸಿವಿಲ್ ಜಡ್ಜ, ಕುಮಟಾ